SEVA BHARATHI
सेवा ही परमो धर्मः

ಸಂಚಿಕೆ : 10
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಅಕ್ಟೋಬರ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಕೆ.ಪಿ.ಸಿ. ಆಸ್ಪತ್ರೆಯ ಸಹಯೋಗದಲ್ಲಿ ಹೊಸಂಗಡಿಯಲ್ಲಿ ಪುನಶ್ಚೇತನ ಕೇಂದ್ರ ಪ್ರಾರಂಭಕ್ಕೆ ಪ್ರಥಮ ಹೆಜ್ಜೆ

**ಸೆಪ್ಟೆಂಬರ್‌ನಲ್ಲಿ ನಡೆದ ರಾಜ್ಯ ಮಟ್ಟದ ರಿಹ್ಯಾಬ್ ಮೇಳದಲ್ಲಿನ ಮುಖ್ಯಾಂಶಗಳು**

**ಇಲಾಖಾ ನಿರ್ದೇಶಕರು ಮತ್ತು ಆಯುಕ್ತರ ಭೇಟಿ**

**23ನೇ ವರ್ಷದ ಸಾರ್ವಜನಿಕ ಶ್ರೀ ದುರ್ಗಾ ಪೂಜೆ ಹಾಗೂ ಶ್ರೀ ಶಾರದೋತ್ಸವ**

**ಪಾದಯಾತ್ರಿಗಳಿಗೆ ಬೆಲ್ಲ-ನೀರು ವಿತರಿಸಿ ಸ್ವಾಗತ**

**ಮಾಗಡಿ ರಸ್ತೆಯ ಸುಮನಹಳ್ಳಿಯಲ್ಲಿರುವ ದಿ ಗುಡ್‌ಸ್ಯಾಮ್ ಫೌಂಡೇಶನ್‌ಗೆ ಭೇಟಿ**

**ಸೇವಾಧಾಮದ ಸನಿವಾಸಿಗಳಿಗೆ ಮಾಹಿತಿ ಕಾರ್ಯಾಗಾರ**

**ಯಶೋಗಾಥೆ**

**ಹಣ್ಣು ವ್ಯಾಪಾರದ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಮೊಹಮ್ಮದ್ ಅಶ್ರಫ್**

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರ,

ನಮ್ಮ ಕೆಲಸಕ್ಕೆ ಒರೆಹಚ್ಚುವ ಸಮಯ ಇನ್ನು ಮುಂದಿನ ದಿನಗಳಲ್ಲಿ ಬರಲಿವೆ. ಸೆಪ್ಟೆಂಬರ್‌ನಲ್ಲಿ ಮಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ರಿಹ್ಯಾಬ್ ಮೇಳದಿಂದ ನಾವೂ ಪ್ರೇರಿತರಾಗಿದ್ದೇವೆ. ಜವಾಬ್ದಾರಿ ಬಂದಿದೆ. ಸರಕಾರದ ಗಮನ ಸೆಳೆದಿದ್ದೇವೆ. ಸಂಘಟಿತ ಶಕ್ತಿಯನ್ನು ಸಮಾಜಕ್ಕೆ ತೋರಿಸಲು ಸಾಧ್ಯವಾಗಿದೆ. ಅಂದೇ ಆರೋಗ್ಯಮಂತ್ರಿಗಳು ಆಹ್ವಾನಿಸಿದ್ದಾರೆ ಬೆಂಗಳೂರಿಗೆ ಬನ್ನಿ ಎಂದು. ಇನ್ನೂ ಕೆಲ ಶಾಸಕರನ್ನು ನಮ್ಮ ವಿಚಾರಕ್ಕೆ, ನಮ್ಮ ಈ ತರಹದ ವೈಕಲ್ಯತೆಗೆ ಬೆನ್ನೆಲುಬಾಗಿ ಧ್ವನಿಯಾಗಿ ಎಂದು ಕೇಳಿಕೊಂಡಿದ್ದೆವು.

ರಾಣೆಬೆನ್ನೂರಿನ ಶಾಸಕರಾದ ಪ್ರಕಾಶ ಕೋಳಿವಾಡರು ಭರವಸೆಯಿತ್ತಿದ್ದು, ಓಂ ಆಸ್ಪತ್ರೆಯ ಡಾ. ಮನೋಜ್ ಸಾಹುಕಾರರ ಪ್ರಯತ್ನದಿಂದ ಸಾಧ್ಯವಾಯಿತು ಎಂಬುದು ಉಲ್ಲೇಖ ನೀಯ. ಕರ್ನಾಟಕ ಸರಕಾರದ ಅಂಗವಿಕಲರ ಅಧಿನಿಯಮದ ರಾಜ್ಯ ಆಯುಕ್ತರನ್ನು ಭೇಟಿ ಮಾಡಿ ಸವಿವರ ಚರ್ಚಿಸಿದ್ದೇವೆ. ಅವರೂ ಇದಕ್ಕೆ ಒಪ್ಪಿಗೆಯನ್ನಿತ್ತಿದ್ದು ಮುಂದಿನ ನಮ್ಮ ಹೆಜ್ಜೆಗೆ ಕೈಜೋಡಿಸಲಿದ್ದಾರೆ. ಅಲ್ಲದೆ ಅಂಗವಿಕಲ ಇಲಾಖಾ ನಿರ್ದೇಶಕ ರನ್ನು ನಮ್ಮೆಲ್ಲ ಅಹವಾಲುಗಳನ್ನು ಬಹಳ ಮುತುವರ್ಜಿಯಿಂದ ಕೇಳಿಸಿಕೊಂಡು ಸ್ಪಂದಿಸುವ ವಿಶ್ವಾಸವನ್ನು ತೋರಿದ್ದಾರೆ.

ಮೋಟಿವೇಷನ್ ಕಂಪೆನಿಯ ಆಹ್ವಾನದ ಮೇರೆಗೆ ತೆರಳಿ ಮುಂದಿನ 3 ವರ್ಷದ ಯೋಜನೆ ರೂಪಿಸಲು ಮಾತುಕತೆ ನಡೆದಿದೆ. ಇಷ್ಟಲ್ಲದೆ ಗುಡ್ ಸ್ಯಾವ್ ಫೌಂಡೇಶನ್‌ನವರ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ wound care ಕೇಂದ್ರವನ್ನು ಭೇಟಿ ಮಾಡಿದ್ದೇವೆ. ಮಾನವೀಯತೆಯ ಮೇರು ಶಿಖರವಾಗಿ ಶ್ರೀ ಡೇವಿಡ್ ಇಟಾಸ್ಕಿಯವರು ನಿರ್ವಹಿಸುತ್ತಿರುವ ಪಾತ್ರ ಅತ್ಯದ್ಭುತ ವಾಗಿದೆ. ಕ್ಷಯ ರೋಗಿಗಳ ಆರೈಕೆಯೊಂದಿಗೆ ಪ್ರತ್ಯೇಕವಾಗಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಒತ್ತಡಗಾಯಗಳ ಗುಣಮುಖಕ್ಕಾಗಿ ಮಾಡುವ ಸೇವೆ ಎಲ್ಲರಿಗೂ ಮಾದರಿ. ಒಟ್ಟಿನಲ್ಲಿ ಸೇವೆಯೇ ಪರಮಧರ್ಮವಾಗಿ ಹಾಸುಹೊಕ್ಕಾಗ ಮಾತ್ರ ಈ ಪರಿಯ ಸೇವಾಕಾರ್ಯ ನೋಡಲು ಸಾಧ್ಯವಾದೀತು.

ಅಕ್ಟೋಬರ್‌ನಲ್ಲಿ ನವರಾತ್ರಿ ಸಂದರ್ಭ ಕನ್ಯಾಡಿಯಲ್ಲಿ ನಡೆದ ಶ್ರೀ ಶಾರದೋತ್ಸವದೊಂದಿಗೆ ನಮ್ಮನ್ನು ತೊಡಗಿಸಿಕೊಂಡು ಧನ್ಯರಾಗಿದ್ದೇವೆ. ನಮ್ಮ ದೂರದೃಷ್ಟಿಯ ಯೋಜನೆಯಾದ ಕಟ್ಟಡದ ನಕ್ಷೆ, ಅಂದಾಜು ವೆಚ್ಚ, 3ಡಿಗಳು ಕೈ ಸೇರಿವೆ. ದಾನಿಗಳು ಸಿಎಸ್‌ಆರ್ ಟೀಮ್‌ಗಳನ್ನು ಮುಂದಿನ ದಿನಗಳಲ್ಲಿ ಭೇಟಿ ಮಾಡಿ ಅಹವಾಲುಗಲನ್ನು ಸಲ್ಲಿಸುವ ಮಹತ್ವದ ಕಾಲಘಟ್ಟದಲ್ಲಿದ್ದೇವೆ ಕಾಮಗಾರಿಗಳು ಪ್ರಾರಂಭವಾಗಿ ಶೀಘ್ರವಾಗಿ ಲೋಕಾರ್ಪಣೆ ಗೊಳ್ಳಬೇಕೆಂಬುದು ನಮ್ಮೆಲ್ಲರ ಆಶಯ. ಈ ಕಟ್ಟಡ ಬಹು ಉದ್ದೇಶಿತಕ್ಕೆ ಉಪಯೋಗವಾಗಲಿದ್ದು, ಇಡೀ ಕರ್ನಾಟಕದಲ್ಲಿ ಮಾದರಿಯಾಗಬಲ್ಲಂತಹ ಪುನಶ್ಚೇತನ ಕೇಂದ್ರವು ಇದಾಗಲಿ. ತಮ್ಮೆಲ್ಲರ ತನು–ಮನ–ಧನ–ಸಮಯಗಳ ಅರ್ಪಣೆಯಾಗಬೇಕಿದೆ.

ಡಿಸೆಂಬರ್‌ನಲ್ಲಿ ನಮ್ಮ ಸೇವಾಭಾರತಿಗೆ 19 ವರ್ಷ ಮುಗಿದು 20ರ ಹೊಸ್ತಿಲಿಗೆ ಕಾಲಿಡುತ್ತಿದೆ. ಸಂಸ್ಥೆಯೊಂದು ದ್ವಿದಶವಾನ ವರ್ಷಾಚರಣೆಯಾಚರಿಸುವುದು ಕೂಡಾ ಹೆಮ್ಮೆಪಡಬೇಕಾದ ವಿದ್ಯಮಾನ. ಒಟ್ಟಿನಲ್ಲಿ ವ್ಯಕ್ತಿ, ಸಮಾಜ, ಸಂಘಟನೆ ಆ ಮೂಲಕ ರಾಷ್ಟ್ರದ ಉನ್ನತಿಗೆ ನಮ್ಮ ಶ್ರಮವಿದೆ.

॥ ಸೇವಾ ಹಿ ಪರಮೋ ಧರ್ಮಃ ॥

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಕೆ.ಪಿ.ಸಿ. ಆಸ್ಪತ್ರೆಯ ಸಹಯೋಗದಲ್ಲಿ ಹೊಸಂಗಡಿಯಲ್ಲಿ ಪುನಶ್ಚೇತನ ಕೇಂದ್ರ ಪ್ರಾರಂಭಕ್ಕೆ ಪ್ರಥಮ ಹೆಜ್ಜೆ



**ಕುಂದಾಪುರ:** ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಹೊಸಂಗಡಿಯಲ್ಲಿ ಸೇವಾಭಾರತಿಯ ಸಹಯೋಗದಲ್ಲಿ ಪುನಶ್ಚೇತನ ಕೇಂದ್ರ ತೆರೆಯುವ ಕುರಿತು ಅಕ್ಟೋಬರ್ 11 ರಂದು ನಡೆಸಿದ ಸಭೆಯಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಗುರುರಾಜ್ ಗಂಟಿಹೊಳೆ ತಿಳಿಸಿದರು

ಈ ಸಂಧರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಿಲ್ಲಾ ಉಪನಿರ್ದೇಶಕಿ ಶ್ಯಾಮಲಾ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಿಲ್ಲಾ ನಿರ್ದೇಶಕಿ ರತ್ನಾ ತಹಶೀಲ್ದಾರ್ ಶೋಭಾಲಕ್ಷ್ಮಿ ಕುಂದಾಪುರ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಶಶಿಧರ್, ಬೈಂದೂರು ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಭಾರತಿ, ಸೇವಾಭಾರತಿ ಕನ್ಯಾಡಿಯು ಕೆ. ವಿನಾಯಕ ರಾವ್, ತಾಲೂಕು ಆರೋಗ್ಯಾಧಿಕಾರಿ ಡಾ। ಪ್ರೇಮಾನಂದ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರಾಘವೇಂದ್ರ ವರ್ಣೇಕರ್, ಪುರಸಭೆ ಕಂದಾಯ ಅಧಿಕಾರಿ ಅಂಜನಿ ಮೊದಲಾದವರು ಇದ್ದರು.

## ಮೋಟಿವೇಷನ್ ಇಂಡಿಯಾ ಸಂಸ್ಥೆಗೆ ಭೇಟಿ

ಮೋಟಿವೇಷನ್ ಇಂಡಿಯಾ ಸಂಸ್ಥೆಯ ರಿಜಿನಲ್ ಮ್ಯಾನೇಜರ್ ಶ್ರೀ ಸುಧಾಕರ್ ಜಿ. ಹಾಗೂ ಹೆಡ್ ಪಾರ್ಟ್‌ನರ್ ಹಾಗೂ ಬ್ಯುಸಿನೆಸ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಪ್ರವೀಣ್ ಕುಮಾರ್‌ರವರನ್ನು ಅಕ್ಟೋಬರ್ 12 ರಂದು ಭೇಟಿ ಮಾಡಲಾಯಿತು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೇವಾಭಾರತಿ ಸಂಸ್ಥೆಯ ಸಹಯೋಗದೊಂದಿಗೆ ಉತ್ತಮ ಸೇವೆಗಳನ್ನು ಒದಗಿಸಲು ನಡೆಸಬಹುದಾದ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು.

ಈ ಸಂಧರ್ಭದಲ್ಲಿ ಸೇವಾಭಾರತಿಯ ಖಜಾಂಚಿ ಶ್ರೀ ಕೆ. ವಿನಾಯಕ ರಾವ್, ಚಿಕ್ಕಬಳ್ಳಾಪುರ ಎಸ್.ಸಿ.ಐ. ನವಜೀವನ ಸಂಘದ ಅಧ್ಯಕ್ಷರು ಶ್ರೀ ಮುನಿರಾಜು, ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್ ಎಂ., ಹಿರಿಯ ಕ್ಷೇತ್ರ ಸಂಯೋಜಕರು ಶ್ರೀ ಮನು ಆರ್. ಉಪಸ್ಥಿತರಿದ್ದರು.



*Abled does not mean enabled. Disabled does not mean less abled*

# ಸೆಪ್ಟೆಂಬರ್‌ನಲ್ಲಿ ನಡೆದ ರಾಜ್ಯ ಮಟ್ಟದ ರಿಹ್ಯಾಬ್ ಮೇಳದಲ್ಲಿನ ಮುಖ್ಯಾಂಶಗಳು




1. ರಾಜ್ಯ ಮಟ್ಟದ ರಿಹ್ಯಾಬ್ ಮೇಳದಲ್ಲಿ ಕರ್ನಾಟಕದ 28 ಜಿಲ್ಲೆಗಳಿಂದ 168 ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಅಲ್ಲದೆ ಇವರೊಂದಿಗೆ 80 ಮಂದಿ ಆರೈಕೆದಾರರು ಹಾಗೂ 30 ಮಂದಿ ವೈದ್ಯ ಕೀಯ ಕ್ಷೇತ್ರದಿಂದ ಇಂಟರ್ನ್‌ಗಳು ಭಾಗವಹಿಸುರುವುದು ಸಂತಸದ ವಿಷಯ.
2. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಲ್ಲಿ 13 ಮಂದಿ ಮಹಿಳೆಯರು ಹಾಗೂ 155 ಮಂದಿ ಪುರುಷರು ಭಾಗವಹಿಸಿದ್ದರು.
3. ಆಗಮಿಸಿದಂತಹ ಎಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ರಿಜಿಸ್ಟ್ರೇಷನ್ ಕಿಟ್‌ಗಳು ಹಾಗೂ ಬೆನ್ನುಹುರಿ ಅಪಘಾತ ಹಾಗೂ ಅದರ ದ್ವಿತೀಯಾಂತರ ಸಮಸ್ಯೆಗಳ ಬಗ್ಗೆ ಕೈಪಿಡಿ ಪುಸ್ತಕ ನೀಡಲಾಯಿತು.
4. ಬೆನ್ನುಹುರಿ ಅಪಘಾತಕ್ಕೊಳಗಾದ 168 ಮಂದಿ ದಿವ್ಯಾಂಗರಿಗೆ ಉಚಿತವಾಗಿ ವೈದ್ಯರಿಂದ ತಪಾಸಣೆ ಹಾಗೂ ಸಲಹೆ ನೀಡಲಾಯಿತು.
5. ಬೆನ್ನುಹುರಿ ಅಪಘಾತಕ್ಕೊಳಗಾದ 120 ಮಂದಿ ದಿವ್ಯಾಂಗರಿಗೆ ರಕ್ತ ಮತ್ತು ಮೂತ್ರದ ಪರೀಕ್ಷೆ, 87 ಮಂದಿಗೆ ಯು.ಎಸ್.ಜಿ ಸ್ಕ್ಯಾನಿಂಗ್ ನಡೆಸಲಾಯಿಗಿತು.
6. ಬೆನ್ನುಹುರಿ ಅಪಘಾತಕ್ಕೊಳಗಾದ 168 ಮಂದಿ ದಿವ್ಯಾಂಗರಿಗೆ ವಿವಿಧ ವಿಷಯಗಳ ಕುರಿತು ಜಾಗೃತಿ ಕಾರ್ಯಾಗಾರಗಳನ್ನು ನಡೆಸಲಾಗಿತ್ತು.
   ಅ. ಬೆನ್ನುಹುರಿ ಅಪಘಾತ, ಪುನಶ್ಚೇತನದ ಅಗತ್ಯತೆಗಳು, ಅಡ್ವೋಕೇಸಿ, ಸರಕಾರದಿಂದ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು.
   ಆ. ಮನೋರಂಜನಾ ಚಟುವಟಿಕೆ ಮತ್ತು ಕಾರ್ಯಕ್ರಮಗಳು ಹಾಗೂ ಜೀವನೋಪಾಯ ಸೌಲಭ್ಯಗಳ ಬಗ್ಗೆ ಕಲ್ಪನೆ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.
7. ಸೆಪ್ಟೆಂಬರ್ 26 ರಂದು ಮಂಗಳೂರಿನಲ್ಲಿ ನಡೆದ ಗಾಲಿಕುರ್ಚಿ ರ್‍ಯಾಲಿಯಲ್ಲಿ ಸುಮಾರು 130 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಭಾಗವಹಿಸಿದ್ದರು. ಇದು ಒಂದು ಚರಿತ್ರೆಯಾಯಿತು.
8. 3 ದಿನಗಳ ಕಾಲ ನಡೆದಂತಹ ರಾಜ್ಯ ಮಟ್ಟದ ರಿಹ್ಯಾಬ್ ಮೇಳದಲ್ಲಿ ಶ್ರೀ ದಿನೇಶ್ ಗುಂಡೂರಾವ್, ಕರ್ನಾಟಕ ಸರಕಾರದ ಆರೋಗ್ಯ ಸಚಿವರು, ಪುತ್ತೂರು ಹಾಗೂ ಬೈಂದೂರು ವಿಧಾನ ಸಭಾ ಕ್ಷೇತ್ರದ ಶಾಸಕರು, ಇಬ್ಬರು ವಿಧಾನ ಪರಿಷತ್ ಸದಸ್ಯರು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು ಭಾಗವಹಿಸಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೌಲಭ್ಯ ಒದಗಿಸುವಲ್ಲಿ ಬೆಂಬಲಿಸುವುದಾಗಿ ಧನಾತ್ಮಕವಾಗಿ ಪ್ರತಿಕ್ರಿಯೆ ನೀಡಿರುತ್ತಾರೆ.

## ರಿಹ್ಯಾಬ್ ಮೇಳದ ಪರಿಣಾಮಗಳು

1. ಸೇವಾಭಾರತಿ ಸಂಸ್ಥೆಯ ಬಗ್ಗೆ ಕರ್ನಾಟಕದ 7 ಜಿಲ್ಲೆಗಳ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ತಿಳಿದಿತ್ತು. ಆದರೆ ರಿಹ್ಯಾಬ್ ಮೇಳದಿಂದ 28 ಜಿಲ್ಲೆಗಳ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸಂಸ್ಥೆಯ ಪರಿಚಯವಾಯಿತು. ಅಷ್ಟೇ ಅಲ್ಲದೆ ಸಂಸ್ಥೆಗೆ ರಿಹ್ಯಾಬ್ ಮೇಳದಿಂದ ರಾಜ್ಯದ 28 ಜಿಲ್ಲೆಗಳ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರನ್ನು ಭೇಟಿಮಾಡಲು ಸಾಧ್ಯವಾಯಿತು
2. ಕರ್ನಾಟಕ ಸರಕಾರದ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಮನವಿಪತ್ರ ಸಲ್ಲಿಸಿ ಸರಕಾರಗಳಿಂದ ದೊರಕಬೇಕಾದ ಸೌಲಭ್ಯಗಳನ್ನು ಅನುಷ್ಠಾನ ಮಾಡುವಂತೆ ವಿನಂತಿಸಲಾಯಿತು
3. ಈ ರಿಹ್ಯಾಬ್ ಮೇಳದಲ್ಲಿ ಆರೋಗ್ಯ ಸಚಿವರು, ಹಾಗೂ ವಿವಿಧ ವಿಧಾನಸಭಾ ಮತ್ತು ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಜೀವನಶೈಲಿ ಹಾಗೂ ಅಪಘಾತದ ಪರಿಣಾಮಗಳ ಬಗ್ಗೆ ಸರಕಾರಕ್ಕೆ ಅರಿವು ಮೂಡಿಸುವ ನಮ್ಮ ಮೊದಲಹೆಜ್ಜೆ ಸಫಲವಾಯಿತು.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ (ಎಪಿಡಿ ) ಬೆಂಗಳೂರು
ಕೆಮ್‌ಟ್ರೆಂಡ್ ಕೆಮಿಕಲ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

## ಮಹನೀಯ ದಾನಿಗಳು

ಶ್ರೀ ಗಿರೀಶ್, ಹಾಸನ
ಶ್ರೀ ವಿಶ್ರಮ್ ಬಾಜಿರಾವ್ ದೇಸಾಯಿ, ಮುಂಬೈ
ಶ್ರೀಮತಿ ರಚಿತಾ ಪಿ. ಉಡುಪ, ಧರ್ಮಸ್ಥಳ
ಶ್ರೀಮತಿ ಸುಲೋಚನ ವೆಂಕಟ್ರಮಣ, ನೆಲ್ಯಾಡಿ
ಶ್ರೀ ರಾಧಾಕೃಷ್ಣ, ಕಡಬ

## ಸೇವಾನಿಧಿ ದಾನಿಗಳು

ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಮಧ್ವಮೂರ್ತಿ ಪಿ., ಉಡುಪಿ
ಶ್ರೀ ಆನಂದ್ ಚಿನ್ನಪ್ಪ ಬೆಳವಟಗಿ, ಬೆಳಗಾವಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ಛಾಯಾ ಸಿ.ಎಸ್, ಉಜಿರೆ
ಶ್ರೀಮತಿ ರಚಿತ ಪಿ. ಉಡುಪ, ಧರ್ಮಸ್ಥಳ
ಡಾ. ರಾಮಕೃಷ್ಣ ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್ ಪಿ., ಕನ್ಯಾಡಿ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಮಧುಸೂದನ್, ಉಜಿರೆ
ಶ್ರೀ ಕೆ. ಕಾರ್ತಿಕ್, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ಪುರುಷೋತ್ತಮ್ ಡಿ.ಎ., ಧರ್ಮಸ್ಥಳ
ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ರಜತ್ ಕುಮಾರ್ ಜಿ.ಡಿ, ವೇಣೂರು
ಶ್ರೀ ಪುರಂದರ, ನಾರ್ಯ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಶ್ರೀಮತಿ ವಿಜಯ ಕಮಲ, ಮಂಗಳೂರು
ಅಮೃತ ಶಿಶುನಿವಾಸ, ಬೆಂಗಳೂರು
ಶ್ರೀ ರಜತ್ ರಾವ್, ಧರ್ಮಸ್ಥಳ

## ಅಕ್ಟೋಬರ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 2 |
| 2. | ವಾಕರ್ ವಿತರಣೆ | – 1 |
| 3. | ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ | – 10 |
| 4. | ನೀರಿನ ಹಾಸಿಗೆ | – 1 |
| 5. | ಕ್ಯಾಲಿಪರ್ | – 2 |

## ಅಂಗವಿಕಲರ ಹಕ್ಕುಗಳ ರಾಜ್ಯ ಆಯುಕ್ತರ ಭೇಟಿ



ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರಾದ ಶ್ರೀ ದಾಸ್ ಸೂರ್ಯವಂಶಿಯವರನ್ನು ಅಕ್ಟೋಬರ್ 12 ರಂದು ಭೇಟಿಮಾಡಿ ಅವರಿಗೆ ಬೆನ್ನುಹುರಿ ಅಪಘಾತದ ದಿವ್ಯಾಂಗರ ಸಮಸ್ಯೆಗಳು ಹಾಗೂ ಸರಕಾರದಿಂದ ಅನುಷ್ಠಾನವಾಗ ಬೇಕಾದ ಸೌಲಭ್ಯಗಳ ಕುರಿತು ತಿಳಿಸಿ ಕಾರ್ಯನುಷ್ಠಾನ ಮಾಡುವಂತೆ ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್, ಚಿಕ್ಕಬಳ್ಳಾಪುರ ಎಸ್.ಸಿ.ಐ ನವಜೀವನ ಸಂಘದ ಅಧ್ಯಕ್ಷರು ಶ್ರೀಮುನಿರಾಜು, ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್ ಎಂ, ಹಿರಿಯ ಕ್ಷೇತ್ರ ಸಂಯೋಜಕರು ಶ್ರೀ ಮನು ಆರ್. ಉಪಸ್ಥಿತರಿದ್ದರು.

## ಇಲಾಖಾ ನಿರ್ದೇಶಕರ ಭೇಟಿ



ಅಂಗವಿಕಲರು ಮತ್ತು ಹಿರಿಯ ನಾಗರೀಕರ ಸಬಲೀಕರಣ ನಿರ್ದೇಶನಾಲಯದ ನಿರ್ದೇಶಕರು ಶ್ರೀ ಸಿದ್ದೇಶ್ವರ ಅವರನ್ನು ಅಕ್ಟೋಬರ್ 12 ರಂದು ಭೇಟಿ ಮಾಡಲಾಯಿತು. ಬೆನ್ನುಹುರಿ ಅಪಘಾತದ ಪರಿಣಾಮ, ಕಾರಣ ಹಾಗೂ ದ್ವಿತೀಯಾಂತರ ಸಮಸ್ಯೆಗಳನ್ನು ಪ್ರಸ್ತುತಪಡಿಸಿ, ಪುನಶ್ಚೇತನ ಕೇಂದ್ರದ ಅವಶ್ಯಕತೆಯ ಬಗ್ಗೆ ತಿಳಿಸಲಾಯಿತು. ಪ್ರತಿ ವಿಭಾಗಗಳಲ್ಲಿ ಪುನಶ್ಚೇತನ ಕೇಂದ್ರವನ್ನು ಪ್ರಾರಂಭಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ರವಿಶಂಕರ್, ಸೇವಾಭಾರತಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್, ಚಿಕ್ಕಬಳ್ಳಾಪುರ ಎಸ್.ಸಿ.ಐ ನವಜೀವನ ಸಂಘದ ಅಧ್ಯಕ್ಷರು ಶ್ರೀ ಮುನಿರಾಜು, ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಶ್ರೀಚರಣ್ ಕುಮಾರ್ ಎಂ., ಹಿರಿಯ ಕ್ಷೇತ್ರ ಸಂಯೋಜಕರು ಶ್ರೀ ಮನು ಆರ್. ಉಪಸ್ಥಿತರಿದ್ದರು.

## 23ನೇ ವರ್ಷದ ಸಾರ್ವಜನಿಕ ಶ್ರೀ ದುರ್ಗಾ ಪೂಜೆ ಹಾಗೂ ಶ್ರೀ ಶಾರದೋತ್ಸವ



ಸಾರ್ವಜನಿಕ ಶ್ರೀ ಶಾರದೋತ್ಸವ ಸಮಿತಿ ಕನ್ಯಾಡಿ ಇದರ ಆಶ್ರಯದಲ್ಲಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಡಿ ಹಾಗೂ ಕನ್ಯಾಡಿ ಫ್ರೆಂಡ್ಸ್ ಕ್ಲಬ್ ಮತ್ತು ಸೇವಾಭಾರತಿ ಕನ್ಯಾಡಿ ಇವುಗಳ ಸಹಕಾರದಲ್ಲಿ 23 ನೇ ವರ್ಷದ ಸಾರ್ವಜನಿಕ ಶ್ರೀ ದುರ್ಗಾ ಪೂಜೆ ಹಾಗೂ ಶ್ರೀ ಶಾರದೋತ್ಸವ ಕಾರ್ಯಕ್ರಮವು ಅಕ್ಟೋಬರ್ 21 ಮತ್ತು 22 ರಂದು ಕನ್ಯಾಡಿಯ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಸಭಾಭವನದಲ್ಲಿ ಜರುಗಿತು.

## ಬೆನ್ನುಹುರಿ ಅಪಘಾತ ನಿರ್ವಹಣಾ ಕ್ರಮದ ಕಾರ್ಯಾಗಾರ



**ಸೌತಡ್ಕ (ಅ.28):** ಸೇವಾಭಾರತಿ ವತಿಯಿಂದ ಸೇವಾಧಾಮದ ಸನಿವಾಸಿಗಳಿಗೆ ಹಾಗೂ ಆರೈಕೆದಾರರಿಗೆ ಬೆನ್ನುಹುರಿ ಅಪಘಾತ ಹಾಗೂ ನಿರ್ವಹಣಾ ಕ್ರಮದ ಬಗ್ಗೆ ಕಾರ್ಯಗಾರವನ್ನು ಅಕ್ಟೋಬರ್ 28 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ನಡೆಸಲಾಯಿತು.

ಬೆನ್ನುಹುರಿ ಅಪಘಾತ ಹಾಗೂ ನಿರ್ವಹಣಾ ಕ್ರಮದ ಬಗ್ಗೆ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮಾಹಿತಿಯಿತ್ತರು. ಒಟ್ಟು 20 ಮಂದಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾಗೇಂದ್ರ ಆದ ನಾನು ಚಿಕ್ಕಮಗಳೂರಿನಿಂದ ಬಂದಿದ್ದು. ನನಗೆ ಟಿ7 ಲೆವೆಲ್ ಇಂಜುರಿ ಆಗಿದ್ದು. 2 ವರ್ಷಗಳ ಕಾಲ ಮನೆಯಲ್ಲಿ ಮಲಗಿದ್ದೆ. ಆದರೆ ನನಗೆ ವಿನಾಯಕ ಸರ್ ತರೀಕೆರೆ ಕ್ಯಾಂಪ್‌ನಲ್ಲಿ ಭೇಟಿಆಗಿ ಸೇವಾಧಾಮಕ್ಕೆ ಬರೋಕ್ಕೆ ಹೇಳಿದರು. ನಾನು ಸೇವಾಧಾಮದಲ್ಲಿ 3 ತಿಂಗಳ ರಿಹ್ಯಾಬ್ ಆದ ನಂತರ ನನ್ನ ಕೆಲಸವನ್ನು ನನ್ನ ಕೆಲಸವನ್ನು ನಾನೇ ಮಾಡಿಕೊಂಡು, ಇವಾಗ ವಾಕರ್ನ್‌ನಲ್ಲಿ ನಡೀತಾ ಇದ್ದೇನೆ. ನಾನು ಸೇವಾಧಾಮದಲ್ಲಿ ಸ್ವತಂತ್ರವಾಗಿ ಬದುಕುವುದು ಹೇಗೆ ಎಂಬುವುದನ್ನು ಕಲಿತುಕೊಂಡೆ. ಸೇವಾಧಾಮ ಮತ್ತು ಸೇವಾಭಾರತಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು ಹಾಗೂ ಸಿಬ್ಬಂದಿವರ್ಗದವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು

**– ನಾಗೇಂದ್ರ ಎನ್.**
**ಕಡೂರು, ಚಿಕ್ಕಮಗಳೂರು**

## ಪಾದಯಾತ್ರಿಗಳಿಗೆ ಬೆಲ್ಲ-ನೀರು ವಿತರಿಸಿ ಸ್ವಾಗತ



**ಧರ್ಮಸ್ಥಳ (ಅ.29):** ಉಜಿರೆಯಿಂದ ಧರ್ಮಸ್ಥಳ ಶ್ರೀ ಮಂಜುನಾಥ ದೇವಸ್ಥಾನದವರೆಗೆ ಧರ್ಮಸಂರಕ್ಷಣಾ ಯಾತ್ರೆಯು ಅಕ್ಟೋಬರ್ 29 ರಂದು ನಡೆಯಿತು.

ಭಾಗವಹಿಸಿದ ಸಾವಿರಾರು ಪಾದಯಾತ್ರಿಗಳಿಗೆ ಮಾರ್ಗ ಮಧ್ಯೆ ಸಂಸ್ಥೆಯ ವತಿಯಿಂದ ಬೆಲ್ಲ– ನೀರು ವಿತರಿಸಿ, ಪಾದಯಾತ್ರಿಗಳನ್ನು ಸ್ವಾಗತಿಸಲಾಯಿತು.

# ಮಾಗಡಿ ರಸ್ತೆಯ ಸುಮನಹಳ್ಳಿಯಲ್ಲಿರುವ ದಿ ಗುಡ್‌ಸ್ಯಾಮ್ ಫೌಂಡೇಶನ್‌ಗೆ ಭೇಟಿ





ಮಾಗಡಿ ರಸ್ತೆಯ ಸುಮನಹಳ್ಳಿಯಲ್ಲಿರುವ ಶ್ರೀ ಡೇವಿಡ್ ಇಟಾಸ್ಕಿ ನೇತೃತ್ವದ ದಿ ಗುಡ್‌ಸ್ಯಾಮ್ ಫೌಂಡೇಶನ್‌ನ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಅಕ್ಟೋಬರ್ 12 ರಂದು ಭೇಟಿ ನೀಡಲಾಯಿತು.

ಈ ಸಂಧರ್ಭದಲ್ಲಿ ಸೇವಾಭಾರತಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್, ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಶ್ರೀಚರಣ್ ಕುಮಾರ್ ಎಂ., ಹಿರಿಯ ಕ್ಷೇತ್ರ ಸಂಯೋಜಕರು ಶ್ರೀ ಮನು ಆರ್. ಉಪಸ್ಥಿತರಿದ್ದರು.

# ವಾಕರ್ ವಿತರಣೆ




ಶ್ರೀ ನಾಗೇಂದ್ರ ಎನ್.
ಕಡೂರು



# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ನಾರಾಯಣ ಫಡ್ಕೆ
ಮುಂಡಾಜೆ



ಕು. ಅಕ್ಷತ
ನಿಡ್ಲೆ



ಶ್ರೀ ಚಂದನ್ ಗುಡಿಗಾರ್
ಕಲ್ಮಂಜ



ಶ್ರೀ ಅರವಿಂದ ಕೆ.
ಮಂಗಳೂರು



ಶ್ರೀಮತಿ ರಚಿತ ಪಿ. ಉಡುಪ, ಬೆಂಗಳೂರು

*Life would be tragic if it weren't funny*

## ಸೇವಾಧಾಮದ ಸನಿವಾಸಿಗಳಿಗೆ ಮಾಹಿತಿ ಕಾರ್ಯಾಗಾರ



**ಸೌತಡ್ಕ (ಅ.18)):** ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಕಾರ್ಯಾಗಾರವನ್ನು ಅಕ್ಟೋಬರ್ 18 ರಂದು ನಡೆಸಲಾಯಿತು. ಕಾರ್ಯಕ್ರಮ ಸಂಯೋಜಕ ರಾದ ಆಶ್ರಿತ್.ಸಿ.ಪಿ. ಅವರು ಪುನಶ್ಚೇತನ ಕೇಂದ್ರದ ಅಗತ್ಯತೆಗಳು, ಜೀವನೋಪಾಯ ಸೌಲಭ್ಯಗಳು ಹಾಗೂ ಸರಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಮಾಹಿತಿ ಇತ್ತರು.

## ಗಾಲಿಕುರ್ಚಿ ವಿತರಣೆ



ಶ್ರೀ ಜಗದೀಶ್
ಕಾರವಾರ




ಶ್ರೀ ಜನಾರ್ಧನ ಗೌಡ
ಬೆಳ್ತಂಗಡಿ

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ







ಅಕ್ಟೋಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಆ್ಯನಿಮೇರಿಜಾನ್, ಸಹಪ್ರಾಧ್ಯಾಪಕರು, ಶಾರೀರಿಕ ಔಷಧ ಮತ್ತು ಪುನಶ್ಚೇತನ, ಕಸ್ತೂರಿ ಬಾ ಮೆಡಿಕಲ್ ಕಾಲೇಜು, ಮಂಗಳೂರು ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ದೈಹಿಕ ಔಷಧ ಮತ್ತು ಪುನಶ್ಚೇತನ ವಿಭಾಗದ ಪ್ರಾಮುಖ್ಯತೆ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 65 ಮಂದಿ ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

### ಒತ್ತಡ ಗಾಯಗಳು ಅಥವಾ ಹಾಸಿಗೆ ಗಾಯಗಳು

ಬೆನ್ನುಹುರಿ ತೊಂದರೆಗೆ ಒಳಗಾದ ವ್ಯಕ್ತಿಯು ಬಹಳ ಸಮಯದವರೆಗೆ ಶರೀರವನ್ನು ಕದಲಿಸದೆ ಒಂದೇ ಸ್ಥಿತಿಯಲ್ಲಿ ಕುಳಿತುಕೊಂಡಾಗ ಅಥವಾ ಮಲಗಿದಾಗ ಸಾಮಾನ್ಯವಾಗಿ ಎಲುಬಿನ ಒತ್ತಡವಿರುವ ಭಾಗದಲ್ಲಿ ಉಂಟಾಗುವ ಗಾಯಗಳೇ ಒತ್ತಡಗಾಯಗಳು.

ಇದನ್ನು ಪ್ರಾರಂಭದ ಹಂತದಲ್ಲಿ ನೋಡಿಕೊಳ್ಳದೆ ಸರಿಯಾದ ಕ್ರಮವನ್ನು ಅನುಸರಿಸದೇ ಇದ್ದು, ಒತ್ತಡವನ್ನು ಪದೇ–ಪದೇ ಅದರ ಮೇಲೆ ಬಿಡುವುದರಿಂದ ಸಣ್ಣಗುಳ್ಳೆಗಳಾಗಿ ಪರಿವರ್ತನೆಗೊಂಡು ಚರ್ಮಕಿತ್ತು ಹುಣ್ಣಾಗುತ್ತಾ ಗಾಯಗಳಾಗಿ ಮೂರನೆಯ ಹಂತಕ್ಕೆ ಮೂಳೆಯನ್ನು ತಲುಪುತ್ತದೆ. ಇಂತಹ ವ್ಯಕ್ತಿಗಳಿಗೆ ಒತ್ತಡಗಾಯವು ವಾಸಿಯಾಗಲು 3 ರಿಂದ 6 ತಿಂಗಳ ಸಮಯ ಬೇಕಾಗುತ್ತದೆ. ಒತ್ತಡ ಗಾಯಗಳು ಮೂರನೇಯ ಮತ್ತು ನಾಲ್ಕನೇಯ ಹಂತವನ್ನು ತಲುಪಿದರೆ ಅಂತಹ ವ್ಯಕ್ತಿಗಳಿಗೆ ಪ್ಲಾಸ್ಟಿಕ್ ಸರ್ಜರಿಯ ಚಿಕಿತ್ಸೆಯನ್ನು ಮಾಡಿಸ ಬೇಕಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ತೀವ್ರ ಅರೋಗ್ಯ ಸಮಸ್ಯೆಗೆ ಒಳಗಾಗುವುದರ ಜೊತೆಗೆ ದುಬಾರಿಯ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಹಾಗಾಗಿ ಮುಂಜಾಗ್ರತೆಯನ್ನು ವಹಿಸಿದ್ದಲ್ಲಿ ಈ ಸಮಸ್ಯೆಯನ್ನು ತಡೆಗಟ್ಟಬಹುದು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಹಣ್ಣು ವ್ಯಾಪಾರದ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಮೊಹಮ್ಮದ್ ಅಶ್ರಫ್ ಯಶೋಗಾಥೆ







ಸಾಮಾನ್ಯವಾಗಿ ಎಲ್ಲರೂ ರಕ್ತದೊತ್ತಡದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಅಸಡ್ಡೆ ಮಾಡುತ್ತಾರೆ. ಆದರೆ ರಕ್ತದೊತ್ತಡ ಸಮಸ್ಯೆಯು ಎಲ್ಲಾ ರೀತಿಯಲ್ಲೂ ಮನುಷ್ಯನ ಜೀವನ ಬದಲಿಸಬಹುದು ಎಂಬುವುದಕ್ಕೆ ನಿದರ್ಶನ ಈ ಯಶೋಗಾಥೆ. ಒಬ್ಬ ನೃತ್ಯಗುರು ಕಡಿಮೆ ರಕ್ತದೊತ್ತಡದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗ ಮೊಹಮ್ಮದ್ ಅಶ್ರಫ್ ಯಶೋಗಾಥೆ ನಿಮ್ಮಮುಂದೆ.

ಮೊಹಮ್ಮದ್ ಅಶ್ರಫ್ ಜನವರಿ 1, 1982 ರಲ್ಲಿ ಜನಿಸಿದರು. ಇವರು ಮೂಲತಃ ಬೆಳ್ತಂಗಡಿ ತಾಲೂಕಿನ ನಿವಾಸಿ. ತಮ್ಮ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಹಳೆಪೇಟೆಯ ಸರಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ಮುಂದಿನ ಶಿಕ್ಷಣ ಮುಂದುವರೆಸುವ ಹಂಬಲ ಇದ್ದರೂ ಮನೆಯ ಕಷ್ಟದಿಂದಾಗಿ ಶಿಕ್ಷಣ ಮುಂದುವರಿಸುವುದನ್ನು ತ್ಯಜಿಸಿದರು. ತದನಂತರ ಅವರ ಒಲವು ನೃತ್ಯದ ಕಡೆಗೆ ತಿರುಗಿತು. ನೃತ್ಯ ಕಲಿಯಲು ಉಜಿರೆಯ 'Top Entertainers' ತಂಡಕ್ಕೆ ಸೇರ್ಪಡೆಗೊಂಡರು. ಇಲ್ಲಿ ಇವರಿಗೆ ಶ್ರೀ ಕೃಷ್ಣ ಹಾಗೂ ಶ್ರೀ ಉದಯ ಇವರು ನೃತ್ಯಗುರುಗಳಾಗಿದ್ದರು.

ನೃತ್ಯ ಕಲಿತ ನಂತರ ಈ ತಂಡದಲ್ಲಿ ವಿದ್ಯಾರ್ಥಿಗಳಿಗೆ ನೃತ್ಯ ಹೇಳಿಕೊಡಲು ಪ್ರಾರಂಭಿಸಿದರು. ಇದರಿಂದ ಮಾಸಿಕವಾಗಿ ರೂ. 3500/– ರಷ್ಟು ಸಂಪಾದನೆ ಮಾಡಲು ಪ್ರಾರಂಭಿಸಿದರು. ಹೀಗೆ ಇದೇ ವೃತ್ತಿಯಲ್ಲಿ 6 ವರ್ಷಗಳ ಕಾಲ ಮುಂದುವರೆಸಿದರು. ಜೀವನ ಸಾಗಿಸುತ್ತಾ 2013 ರಲ್ಲಿ ತಮ್ಮ ವೈವಾಹಿಕ ಜೀವನ ಪ್ರಾರಂಭಿಸಿದರು. ಎಲ್ಲವೂ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂದು ಅಂದುಕೊಳ್ಳುತ್ತಿದ್ದ ಸಂಧರ್ಭದಲ್ಲಿ ಕಡಿಮೆ ರಕ್ತದೊತ್ತಡ ಸಮಸ್ಯೆಯಿಂದ ಬಿದ್ದರು. ಚಿಕಿತ್ಸೆಗೆಂದು ಬೆಳ್ತಂಗಡಿಯ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ, ಬೆನ್ನುಹುರಿ ಅಪಘಾತವಾಗಿದೆ ಎಂದು ತಿಳಿದು ಮಂಗಳೂರಿನ ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ ದಾಖಲಾದರು. ತದನಂತರ ಇವರ ಸಹೋದರರು ಎ.ಜೆ. ಆಸ್ಪತ್ರೆಗೆ ಸ್ಥಳಾಂತರಿಸಿದರು. ಇಲ್ಲಿ 2 ತಿಂಗಳ ಕಾಲ ಚಿಕಿತ್ಸೆ ಪಡೆದರು. ಮನೆಗೆ ಮರಳಿದ ಬಳಿಕ 1 ವರ್ಷಗಳ ಕಾಲ ಆಯುರ್ವೇದ ಚಿಕಿತ್ಸೆ ಮಾಡಿದರು. ಇವರಿಗೆ ಈ ಸಮಯದಲ್ಲಿ ಅವರ ಪತ್ನಿಯು ಬೆನ್ನೆಲುಬಾಗಿ ನಿಂತು ಪ್ರತಿಹೆಜ್ಜೆಯಲ್ಲೂ ಸಹಕಾರ ಹಾಗೂ ಧೈರ್ಯ ನೀಡಿದ್ದರು.

ಇಂತಹ ಸಮಯದಲ್ಲಿ ಪ್ರಸ್ತುತ ಸೇವಾಭಾರತಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್‌ರವರು 2016 ರಲ್ಲಿ ಇವರಿಗೆ ಪುನಶ್ಚೇತನ ಪಡೆಯುವಂತೆ ಸಲಹೆ ನೀಡಿದರು. 2016 ರಲ್ಲಿ ಸೇವಾಧಾಮ ಪುನಶ್ಚೇತನ ಕೇಂದ್ರ ಪ್ರಾರಂಭವಾಗದೆ ಇದ್ದ ಕಾರಣ ಬೆಂಗಳೂರಿನ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯಲ್ಲಿ ಪುನಶ್ಚೇತನ ಪಡೆಯುವಂತೆ ತಿಳಿಸಿದರು. 3 ತಿಂಗಳ ಕಾಲ ಪುನಶ್ಚೇತನ ಪಡೆದ ನಂತರ ತಮ್ಮ ಕೆಲಸ ತಾವೇ ಮಾಡುವಷ್ಟು ಸ್ವತಂತ್ರರಾದರು. ಎಪಿಡಿಯಿಂದ ದಿನನಿತ್ಯದ ಚಟುವಟಿಕೆಗಳನ್ನು ಮಾಡುವುದನ್ನು ಕಲಿಯುವುದರ ಜೊತೆಗೆ ವಾಹನಗಳಿಗೆ ವರ್ಗಾವಣೆಯಾಗುವ ಕೌಶಲ್ಯ ತರಬೇತಿಯನ್ನು ಪಡೆದುಕೊಂಡರು. ಸೇವಾಭಾರತಿಯಿಂದ ಗಾಲಿಕುರ್ಚಿ, ವಾಕರ್, ಸೆಲ್ಫ್‌ಕೇರ್ ಹಾಗೂ ಮೆಡಿಕಲ್ ಕಿಟ್ ಸೌಲಭ್ಯ ಪಡೆದು ಕೊಂಡಿದ್ದಾರೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲಾ ಬೆನ್ನುಹುರಿ ಅಪಘಾತ ಕ್ಕೊಳಗಾದವರ ಒಕ್ಕೂಟದ ಉಪಾಧ್ಯಕ್ಷರಾಗಿದ್ದಾರೆ.

**ಪುನಶ್ಚೇತನ ಪಡೆದುಕೊಂಡ ನಂತರ ಜೀವನೋಪಾಯಕ್ಕೆ ಏನಾದರೂ ಮಾಡಬೇಕೆಂದು ಯೋಚಿಸಿ 2019 ರಲ್ಲಿ ತಮ್ಮ ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡಲು ನಿರ್ಧರಿಸಿದರು. ಇವರು ದಕ್ಷಿಣ ಕನ್ನಡದ ವಿವಿಧ ತಾಲೂಕಿಗೆ ತಮ್ಮ ರೆಟ್ರೋಫಿಟ್ಟೆಡ್ ಸ್ಕೂಟರ್‌ನಲ್ಲಿ ಚಲಿಸಿ ಶಾಲಾಕಾಲೇಜುಗಳ ಆವರಣದಲ್ಲಿ ವಿಶೇಷ ಕಾರ್ಯಕ್ರಮಗಳಿದ್ದಾಗ ಹಣ್ಣುಹಂಪಲು ಮಾರಾಟ ಮಾಡುತ್ತಾರೆ. ಹಣ್ಣುಹಂಪಲು ಮಾರಾಟದಿಂದ ಮಾಸಿಕವಾಗಿ ರೂ. 3000/– ದಷ್ಟು ಸಂಪಾದನೆ ಮಾಡುತ್ತಾರೆ. ಪ್ರಸ್ತುತ ಇವರು ವಾರದ 3–4 ದಿನಗಳಲ್ಲಿ ಮಂಗಳೂರು, ಕಾರ್ಕಳ, ಮೂಡಬಿದ್ರಿ, ಪುತ್ತೂರು, ಬೆಳ್ತಂಗಡಿ, ಚಾರ್ಮಾಡಿ, ಧರ್ಮಸ್ಥಳದಂತಹ ಸ್ಥಳಗಳಿಗೆ ಹೋಗಿ ವ್ಯಾಪಾರ ಮಾಡುತ್ತ ಸ್ವಾವಲಂಬಿ ಜೀವನ ಸಾಗಿಸಿ ಎಲ್ಲರಿಗೂ ಸ್ಫೂರ್ತಿಯಾಗುವಂತೆ ಬದುಕು ರೂಪಿಸಿಕೊಂಡಿದ್ದಾರೆ.**